FEES PAID TO COUNSELS CONNECTED WITH KRISHNA-GODAVARI WATER DISPUTE TRIBUNAL

19. Sri H. T. KRISHNAPPA (Nagamangala).— Will the Minister of State for Major Irrigation be pleased to state:—

the expenditure incurred by Government in payment of legal fees for assisting the Tribunal constituted for resolving the Krishna-Godavari water dispute (names of the counsels and the amount paid to each of them may be furnished)?

Srs H. N. NANJE GOWDA (Minister of State for Major Irrigation).—

Sriyuths:—

1	M. K. Nambyar	Rs. 2,00,000
2	N. A. Subramanyam	Rs. 41,500
3	T. Krishna Rao	Rs. 5,98,000
4	A. G. Holla	Rs. 2,03,170
5	S. S. Javali	Rs. 2,14,800
6	K. G. Datar	Rs. 84,000
7	V. S. Malimath	Rs. 55,000

ಶ್ರೀ ಎಂ. ಎಸ್. ಕೃಷ್ಣನ್.— ಕೃಷ್ಣ-ಗೋದಾವರಿ ಜಲವಿವಾದವನ್ನು ಬಗೆಹರಿಸುವುದಕ್ಕೆ ರಚಿಸಲಾದ ನ್ಯಾಯಾಧೀಶರುಗಳ ಬಗ್ಗೆ ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದೀರಿ, ಅದರಲ್ಲಿ ೧೯೭೦ನೇ ಇಸವಿಗೆ ಮಾತ್ರ, ಶ್ರೀಮಾನ್ ನಂಬಿಯಾರ್ ಎರಡು ಲಕ್ಷ ರೂಪಾಯಿಗಳು, ಶ್ರೀ ಸುಬ್ರಹ್ಮಣ್ಯ ಅವರಿಗೆ ೪೧,೫೦೦ ರೂಪಾಯಿಗಳು, ಮಳಿಮಠ ಅವರಿಗೆ ೫೫ ಸಾವಿರ ರೂಪಾಯಿಗಳು ಶ್ರೀ ಕಾಲ್ರಾ ಅವರಿಗೆ ೩೪,೯೨೨ ರೂಪಾಯಿಗಳು ಮತ್ತು ಪಿ. ಆರ್. ಕೃಷ್ಣರಾವ ಅವರಿಗೆ ೪,೫೦೦ ರೂಪಾಯಿ ಕೊಟ್ಟಿದ್ದೀರಿ. ೧೯೭೦ನೇಯ ಇಸವಿಯಾದ ನಂತರ ೧,೨,೩,೪,೫,೬ ಐಟಂಗಳಲ್ಲಿರತಕ್ಕವರನ್ನು ಸರಕಾರದವರು ನೇಮಿಸಿಕೊಂಡಿಲ್ಲ ಎಂದು ಅರ್ಥವಾಗುತ್ತದೆ. ಅವರನ್ನು ನೇಮಿಸಿಕೊಂಡಿದ್ದರೂ ಅವರಿಗೂ ಏನೂ ಹಣ ಕೊಡಲಿಲ್ಲ ಎಂದು ಅರ್ಥನೇ?

ಶ್ರೀ ಎಚ್. ಎನ್. ನಂಜೇಗೌಡ — ಶ್ರೀಮಾನ್ ನಂಬಿಯಾರ್ ಮತ್ತು ಸುಬ್ರಹ್ಮಣ್ಯಂ ೧೯೭೦ರ ವರೆಗೆ ಇದ್ದರು ಅವರಿಗೆ ಅಷ್ಟು ಹಣ ಕೊಟ್ಟಿದ್ದೀವೆ ಅವರು ಆದಮೇಲೆ ಜುಲೈನಿಂದ ಕೃಷ್ಣರಾವ ಅವರನ್ನು ನೇಮಕ ಮಾಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಸೀರಿಯಲ್ ನಂಬರ್ಸ್ ೧,೨,೩,೪,೫ಗಳಲ್ಲಿರುವವರನ್ನು ೧೯೭೦ನೆಯ ಇಸವಿಯಾದ ಮೇಲೆ ನೇಮಕಮಾಡಿಕೊಂಡಿಲ್ಲವೇ?

ಶ್ರೀ ಎಚ್. ಎನ್. ನಂಜೇಗೌಡ.— ಸೀರಿಯಲ್ ನಂಬರ ೧,೨ರಲ್ಲಿ ಇದ್ದವರು ಜುಲೈ ೭ರಲ್ಲಿ ರಾಜಿನಾಮೆ ಕೊಟ್ಟರು. ಅವರಿಗೆ ಅಲ್ಲಿಯವರೆಗೆ ಹಣ ಕೊಟ್ಟಿದ್ದೇವೆ.

ಶ್ರೀ ಎಂ.ಎಸ್.ಕೃಷ್ಣನ್.—ಸೀರಿಯಲ್ ನಂಬರ ೭,೮,೯ ರಲ್ಲಿರುವವರ ಬಗ್ಗೆ ?

ಶ್ರೀ ಎಚ್. ಎನ್. ನಂಜೇಗೌಡ.— ಅಲ್ಲಿ ಯಾವ ತಾರೀಖು ಇದೆಯೋ ಅಲ್ಲಿಯ ವರೆಗೆ ಮಾತ್ರ ಹಣವನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಪರಿಶಿಷ್ಟದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ಒಬ್ಬರಿಗೆ ೨ ಲಕ್ಷ ರೂಪಾಯಿ, ಟಿ. ಕೃಷ್ಣರಾಯರಿಗೆ ೫,೯೮,೦೦೦ ರೂಪಾಯಿ, ಇನ್ನೊಬ್ಬರಿಗೆ ೨,೦೬,೧೭೦ ರೂಪಾಯಿ ಹೀಗೆಲ್ಲಾ ಕೊಡಲಾಗಿದೆ. ಇದಕ್ಕೆ ಆಧಾರವೇನಿದೆ? ಇದನ್ನು ಯಾವ ಆಧಾರದ ಮೇಲೆ ಫಿಕ್ಸ್ ಮಾಡಿದೆ?

ಶ್ರೀ ಎಚ್. ಎನ್. ನಂಜೇಗೌಡ —ಹೀರಂಗ್ ಇದ್ದಾಗ ಕೆಲವರಿಗೆ ದಿನಕ್ಕೆ ಇಷ್ಟು ಎಂದು ಕೊಡಲಾಗಿದೆ, ಕೆಲವರಿಗೆ ತಿಂಗಳ ಲೆಕ್ಕದ ಪ್ರಕಾರ ಕೊಟ್ಟಿದೆ. ಎಲ್ಲಾ ಸೇರಿ ಇಷ್ಟು ಕೊಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ತಪಶೀಲು ಕೊಡಿ

ಶ್ರೀ ಎಚ್. ಎನ್. ನಂಜೇಗೌಡ — ಈಗ ಸಭ್ಯಕ್ಕೆ ಆದು ನನ್ನ ಬಳಿ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸ್ವಾಮಿ, ವಿವಾದ ಪ್ರಾರಂಭವಾಗುವುದಕ್ಕೆ ಮುಂಚೆಯೇ ೧೪ ಲಕ್ಷ ಚಿಲ್ಲರೆ ಹಣವನ್ನು ವಕೀಲರಿಗೆ ಪಾವತಿ ಮಾಡಿದ್ದಾರೆ. ಅದರ ಪೂರ್ಣ ವಿವರವಿಲ್ಲವೆಂದು ಹೇಳುತ್ತಾರೆ. ಇಷ್ಟು ದೊಡ್ಡ ಪ್ರಮಾಣದ ಹಣ ಕೊಟ್ಟಿರುವುದರಿಂದ ವಿವರಣೆಯ ಅವಶ್ಯಕತೆ ಇದೆ. ದಿನದ ಲೆಕ್ಕದ ಪ್ರಕಾರ ಮತ್ತು ತಿಂಗಳ ಲೆಕ್ಕದ ಪ್ರಕಾರ ಕೊಟ್ಟಿರುವುದುರಂಟು. ಅನೇಕ ಸಂದರ್ಭಗಳಲ್ಲಿ ಪಾವತಿ ಮಾಡಿರುವುದಾಗಿ ತಿಳಿಸಿರುವುದರಿಂದ ಯಾವ ಕಾಲದಲ್ಲಿ ಎಷ್ಟು ಪಾವತಿಯಾಗಿದೆ, ಎಷ್ಟು ಕೆಲಸಕ್ಕೆ ಎಷ್ಟು ಕೊಡಲಾಗಿದೆ ಎಂಬ ವಿವರ ಅಗತ್ಯವಾಗಿದೆ ಆದುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕು

ಶ್ರೀ ಎಚ್. ಎನ್. ನಂಜೇಗೌಡ.—ತಪಶೀಲನ್ನು ಕೇಳುತ್ತಿದ್ದಾರೆ, ಮೋಡ್ ಆಫ್ ಪೇಮಂಟ ಬೇಕೆಂದು ಹೇಳುತ್ತಿದ್ದಾರೆ. ಅದನ್ನು ಒದಗಿಸುತ್ತೇನೆ. ಆದುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ.— ತಪಶೀಲನ್ನು ಒದಗಿಸಿದ ಮೇಲೆ ನಾವು ಪ್ರಶ್ನೆ ಕೇಳಬೇಕಾತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ತಡೆಹಿಡಿಯಬಹುದು, ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈ ವಿವಾದ ಕೋರ್ಟಿಗೆ ಹೋಗಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅದು ಸರಿ. ಕೃಷ್ಣ ನೀರಿನ ಹಂಚಿಕೆಗೆ ಸಂಬಂಧಿಸಿದ ವಿವಾದ ಮುಕ್ತಾಯವಾಗಿದೆ. ಗೋದಾವರಿ ನೀರಿನ ವಿವಾದ ಇನ್ನೂ ಮುಕ್ತಾಯವಾಗಿಲ್ಲ. ೧೦–೧೦–೭೩ ರಲ್ಲಿ ಪ್ರಾರಂಭವಾಗುವುದು. ಒಂದೇ ಟ್ರಿಬ್ಯೂನಲ್ಲಿಗೆ ಗೋದಾವರಿ ಮತ್ತು ಕೃಷ್ಣ ಈ ಎರಡೂ ನದಿಗಳ ನೀರಿನ ವಿವಾದ ಇತ್ಯರ್ಥ ಮಾಡಲು ವಹಿಸಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಬಹಳ ವಿವರ ಬೇಕಾಗಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯುವದು ಅವಶ್ಯಕ. ಎಷ್ಟು ಸಿಟಿಂಗ್ಸ ಆಯಿತು? ಎಷ್ಟು ದಿನ ಅಥವ ತಿಂಗಳು ವಕೀಲರು ಒಂದು ಕಡೆ ಸೇರಿ ತನಿಖೆ ನಡೆಸಿದ್ದಾರೆ?

ಶ್ರೀ ಎಚ್. ಎನ್ ನಂಜೇಗೌಡ.— ಭಾರಿ ವಿವರ ಬೇಕಾದರೆ ನೋಟೀಸ್ ಬೀರೆ ಕೊಟ್ಟರೆ ತರಿಸಿಕೊಡುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.— ವಿವರ ಸಾಕಷ್ಟಿಲ್ಲದಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಈಗ ಕೊಟ್ಟಿರುವ ಮೊಬಲಗು ಬಹಳ ಹೆಚ್ಚು. ಈ ವಿವಾದ ತೀರ್ಮಾನವಾಗುವುದರಲ್ಲಿ ಇನ್ನೂ ಎಷ್ಟು ಖರ್ಚಾಗುವುದೋ ಗೊತ್ತಿಲ್ಲ ಆದುದರಿಂದ ಮಂತ್ರಿಗಳು ಪೂರ್ಣವಾದ ವಿವರ ಕೊಡಬೇಕೆಂದು ಅಪೇಕ್ಷೆಪಡುತ್ತೇನೆ. ಮಂತ್ರಿಗಳು ಈಗ ನಮಗೆ ಬೇಕಾದ ವಿವರ ಕೊಡಲು ಸಿದ್ಧವಾಗಿಲ್ಲ. ಅಧ್ಯಕ್ಷರು ಈ ಪ್ರಶ್ನೆಯನ್ನು ತಡೆಹಿಡಿಯಬೇಕಾದ್ದು ಅವಶ್ಯಕ.

ಶ್ರೀ ಎಚ್. ಎನ್. ನಂಜೇಗೌಡ.—ಇಂಥ ವಿವಾದಗಳ ಸಂಬಂಧದಲ್ಲಿ ಬೇರೆ ರಾಜ್ಯಗಳಲ್ಲಿ ಎಷ್ಟು ಖರ್ಚುಮಾಡುವರು ಎಂಬುದನ್ನು ಬಹುಶಃ ಅವರು ಗಮನಿಸಿಲ್ಲ. ನೆರೆ ರಾಜ್ಯಗಳಲ್ಲಿ ಇಂಥ ಸಂದರ್ಭಗಳಲ್ಲಿ ಇದಕ್ಕಿಂತ ಹೆಚ್ಚು ಖರ್ಚುಮಾಡಿದ್ದಾರೆ ಅಂತರ ರಾಜ್ಯ ವಿವಾದಗಳಲ್ಲಿ ಒಳ್ಳೆಯ ವಕೀಲರನ್ನು ನೇಮಿಸಬೇಕಾಗುವುದು. ಹಾಗಿರುವಾಗ ಇಷ್ಟು ಖರ್ಚುಮಾಡಿರುವುದೇನೂ ಹೆಚ್ಚಲ್ಲ. ನೇಮಿಸಿದ್ದ ವಕೀಲರು ಸಮರ್ಪಕವಾದ ಕೆಲಸ ಸಹ ಮಾಡಿದ್ದಾರೆ.

Sri M. S. KRISHNAN.— I want to know whether these short Notice Questions are held over or have we to ask supplementaries?

MADAM SPEAKER.— These short Notice Questions are held over